( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ದಿಃ06/07/2024
ಅಸಲು ದಾವೆ.ಸಂ. 38/2016
ಡಿ.ಡಬ್ಲ್ಯೂ1

( ಪಾಟೀ ಸವಾಲುಃ ಶ್ರೀ.ಓ.ಡಿ.ಜಿ., ವಕೀಲರಿಂದ ವಾದಿಯ ಪರವಾಗಿ )

ನನ್ನ ತಂದೆಯಹೆಸರು ಕೃಷ್ಣೇಗೌಡ. ನನ್ನ ತಂದೆಯ ಜೊತೆ ಒಡಹುಟ್ಟಿದವರು 6 ಜನ, ಅವರುಗಳೆಂದರೆ ಮೊದಲನೆಯವರು ಗೋವಿಂದೇಗೌಡ ಅಂದರೆ ವಾದಿಯ ತಂದೆ, 2 ನೇಯವರು ಕೃಷ್ಣೇಗೌಡ ಅಂದರೆ ನನ್ನ ತಂದೆ, 3 ನೇಯವರು ರಾಮೇಗೌಡ, 4 ನೇಯವರು ಸೂರ್ಯನಾರಾಯಣ 5 ನೇಯವರು ತಿಮ್ಮೇಗೌಡ ಹಾಗೂ 6 ನೇಯವರು ಶಿವಣ್ಣ. ಸದರಿ 6 ಜನ ದಿಃ09-03-1970 ರಂದು ಅವರ ಕುಟುಂಬದ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ನೋಂದಾಯಿತ ವಿಭಾಗ ಪತ್ರ ವನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿ.

ದಾವಾ ಅನುಸೂಚಿ ಸ್ವತ್ತು ಸೂರ್ಯನಾರಾಯಣರವರ ಹಿಸ್ಸೆಗೆ ಹೋಗಿದ್ದ ಸ್ವತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ದಾವಾ ಅನುಸೂಚಿ ಸ್ವತ್ತು ಸಂಪೂರ್ಣವಾಗಿ ಸೂರ್ಯನಾರಾಯಣರವರ ಹಿಸ್ಸೆಗೆ ಹೋಗಿರಲಿಲ್ಲ ಎಂದು ನುಡಿಯುತ್ತಾರೆ. ದಿಃ05-01-1973 ರಂದು ಸೂರ್ಯನಾರಾಯಣರವರಿಂದ ವಾದಿಯ ತಂದೆ ದಾವಾ ಅನುಸೂಚಿ ಸ್ವತ್ತನ್ನು ಬರೆಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಒಂದು ಮನೆಯನ್ನು ಮಾತ್ರ ಅವರು ಬರೆಸಿಕೊಂಡಿರುತ್ತಾರೆ 3 ಗುಂಟೆ ಜಾಗ ಬರೆಸಿಕೊಂಡಿಲ್ಲ ಎಂದು ನುಡಿಯುತ್ತಾರೆ.

ಸೂರ್ಯನಾರಾಯಣರವರ ಹಿಸ್ಸೆಗೆ ಬಂದ ಸಂಪೂರ್ಣ ಸ್ವತ್ತು ಅಂದರೆ ಮನೆ ಮತ್ತು ಹಿತ್ತಲನ್ನು ಆರ್.ಟಿ. ಗೋಂದೇಗೌಡರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಮನೆಯನ್ನು ಮಾತ್ರ ಮಾರಾಟ ಮಾಡಿರುತ್ತಾರೆ 3 ಗುಂಟೆ ಜಾಗವನ್ನು ಮಾರಾಟ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಆರ್.ಟಿ. ಗೋವಿಂದೇಗೌಡರವರಿಗೆ 3 ಜನ ಮಕ್ಕಳು. ಅವರುಗಳೆಂದರೆ ಶ್ರೀನಿವಾಸ, ಪರಶುರಾಮ ಮತ್ತು ಪ್ರಭಾಕರ.

ಸೂರ್ಯನಾರಾಯಣರವರಿಂದ ಆರ್.ಟಿ. ಗೋಂದೇಗೌಡರವರು ಕ್ರಯಕ್ಕೆ ಪಡೆದ ಸ್ವತ್ತನ್ನು ಆರ್.ಟಿ. ಗೋಂದೇಗೌಡರವರ ಮಕ್ಕಳು ವಾದಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿ. ಆ ಪ್ರಕಾರ ಸದರಿ ಸ್ವತ್ತನ್ನು ವಾದಿ ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ.

ಸೂರ್ಯನಾರಾಯಣರವರಿಂದ ಆರ್.ಟಿ. ಗೋಂದೇಗೌಡರವರು ಬರೆಸಿಕೊಂಡ ಮನೆ ಹಾಗೂ ಹಿತ್ತಲಿಗೆ ಚೆಕ್ಕು ಬಂದಿಃ ಪೂರ್ವಕ್ಕೆ ಗಡಾರಿ ತಿಮ್ಮೇಗೌಡರ ಮನೆ ಮತ್ತು ಹಿತ್ತಲು ಎಂದರೆ ಸರಿ. ಪಶ್ಚಿಮಕ್ಕೆ ಎಲಕ್ಕಿದಾಸಪ್ಪ ಮತ್ತು ಹೊನ್ನೇಗೌಡರವರ ಮನೆ ಎಂದರೆ ಸರಿ. ದಕ್ಷಿಣಕ್ಕೆ ರಾಜಬೀದಿ ಎಂದರೆ ಸರಿ. ಉತ್ತರಕ್ಕೆ ನಾಲೆ ಎಂದರೆ ಸರಿ.

( ಮುಂದುವರೆದ ಪಾಟೀ ಸವಾಲುಃ ವಾದಿಯ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಅನುಮತಿಸಲಾಯಿತು. )

**( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )**

**ಓ.ಹೇ.ಕೇ.ಸ.ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**

**ಜೆ.ಎಂ.ಎಫ್.ಸಿ,ಅರಕಲಗೂಡು.**